**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪಾಂಡವಪುರ.**

**ಸಿ.ಸಿ. 775/2021**

ಸಾಕ್ಷಿದಾರರ ಹೇಳಿಕೆ ಃ

| | | | | |
|---|---|---|---|---|
| ಹೆಸರು | ಃ | ಸೋಮೇಶ್ | ಚಾಸಾಃ **2** | ಪ್ರಾಸಾಃ **2** |
| ತಂದೆಯ ಹೆಸರು | ಃ | ಕೆಂಪರಾಜು | | |
| ವಯಸ್ಸು | ಃ | 36 ವರ್ಷ | | |
| ವೃತ್ತಿ | ಃ | ವ್ಯವಸಾಯ | | |
| ವಾಸಸ್ಥಳ | ಃ | ಎಂ.ಶೆಟ್ಟಹಳ್ಳಿ ಗ್ರಾಮ | | |

ದಿನಾಂಕಃ **24.06.2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದ ಃ

**01**. ಆರೋಪಿ ನಮ್ಮ ಊರಿನವರು. ಸುಮಾರು 4 ವರ್ಷಗಳ ಹಿಂದೆ ಯಾರೋ ಫೋನ್ ಮಾಡಿ ನನ್ನ ಅಣ್ಣನಿಗೆ ರಸ್ತೆ ಅಪಘಾತವಾಗಿದೆ ಎಂದು ತಿಳಿಸಿದರು. ಮಾರನೇ ದಿನ ನಾನು ಬಾನವಿ ಆಸ್ಪತ್ರೆಗೆ ಹೋದೆ. ಆದಾದ 6 ತಿಂಗಳ ನಂತರ ತೀರಿಕೊಂಡ. ಅಪಘಾತ ಹೇಗಾಯಿತು ಗೊತ್ತಿಲ್ಲ. ಯಾರ ತಪ್ಪಿನಿಂದ ಅಪಘಾತವಾಯಿತು ನನಗೆ ಗೊತಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ.ರು ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು.)**

ಪಾಟೀ ಸವಾಲು ಃ ಸ.ಸ.ಅ.ರವರಿಂದ ಃ

**01**. ದಿನಾಂಕಃ 11.04.2021 ರಂದು ಮದ್ಯಾಹ್ನ 2.30 ರ ಸಮಯದಲ್ಲಿ ನನ್ನ ಅಣ್ಣ ಕೊಡಾಲ ಗ್ರಾಮಕ್ಕೆ ಸ್ನೇಹಿತರನ್ನು ನೋಡಿಕೊಂಡು ಬರುತ್ತೇನೆ ಎಂದು ಹೋಗಿದ್ದ

ಎಂದರೆ ಸರಿ. ಆತ ನವೀನ ಎಂಬ ಹುಡುಗನ ಬೈಕ್ ನಂಃ ಕೆ.ಎ.11 ಇ.ಆರ್.6556 ಹಿಂಭಾಗದಲ್ಲಿ ಕುಳಿತುಕೊಂಡು ಎರಗೇಗೌಡರನ ಹಳ್ಳಿ ಗ್ರಾಮದ ರಮೇಶ್ ರವರ ಜಮೀನಿನ ನೇರದಲ್ಲಿ ನವೀನ ಬೈಕ್ ಅನ್ನು ಅತಿವೇಗ ಮತ್ತು ಅಜಾಗರುಕತೆಯಿಂದ ಓಡಿಸಿಕೊಂಡು ಬಂದ ಎಂದರೆ ಸರಿಯಲ್ಲ. ಆಗ ರಸ್ತೆಗೆ ಅಡ್ಡಲಾಗಿ ನಾಯಿ ಬಂದಿದ್ದರಿಂದ ನಿಯಂತ್ರಿಸಲಾಗದೇ ಸಡನ್ನಾಗಿ ಬ್ರೇಕ್ ಹಾಕಿದ್ದರಿಂದ ಬೈಕ್ ಸ್ಕಿಡ್ ಆಗಿ ಬಿದ್ದ ಪರಿಣಾಮ ನಾಗೇಶನ ಕುತ್ತಿಗೆಯ ಬಳಿ ಪೆಟ್ಟಾಗಿದೆ ಎಂದರೆ ಸರಿಯಲ್ಲ. ನನಗೆ ವಿಚಾರ ತಿಳಿದು ಸ್ಥಳಕ್ಕೆ ಬಂದು ನೋಡಲಾಗಿ ನಾಗೇಶನಿಗೆ ಅಲ್ಪ ಸ್ವಲ್ಪ ಜ್ಞಾನ ಇತ್ತು, ನವೀನನಿಗೆ ಕೈ ಕಾಲು ತರಚಿತ್ತು ಎಂದರೆ ಸರಿಯಲ್ಲ. ಈ ಸಂಬಂದ ನನ್ನ ತಂದೆ ನಿಪಿ-1 ರಂತೆ ದಿಃ14.04.2021 ರಂದು ಪಾಂಡವಪುರ ಪೊಲೀಸರಿಗೆ ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

**2.** ನನ್ನ ಅಣ್ಣ ಮೈಸೂರಿನ ಬಾನವಿ ಆಸ್ಪತ್ರೆಯಲ್ಲಿ ಒಳ ರೋಗಿಯಾಗಿ ಚಿಕಿತ್ಸೆ ಪಡೆದಿದ್ದ ಎಂದರೆ ಸರಿ. ಆ ನಂತರ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದ ಎಂದರೆ ಸರಿ. ಈ ಅಪಘಾತದಿಂದ ನನ್ನ ಅಣ್ಣ ನಾಗೇಶನಿಗೆ ಕುತ್ತಿಗೆ, ಕತ್ತಿನ ಮೂಳೆಗೆ, ಬೆನ್ನು ಮೂಳೆ ಮುರಿದು ತೀವ್ರವಾಗ ಪೆಟ್ಟಾಗಿ ಪ್ರಜ್ಞಹೀನ ಸ್ಥಿತಿಯಲ್ಲಿದ್ದ ಎಂದರೆ ಸರಿ. ದಿಃ24.09.2021 ರಂದು ಬೆಳಗ್ಗೆ ಉಸಿರಾಟದ ತೊಂದರೆ ಉಂಟಾಗಿದ್ದರಿಂದ ಮೃತಪಟ್ಟ ಎಂದರೆ ಸರಿ. ಈ ಸಂಬಂದ ನನ್ನ ತಂದೆ ದಿಃ24.09.2021 ರಂದು ನಿಪಿ-2 ರಂತೆ ಪಾಂಡವಪುರ ಪೊಲೀಸರಿಗೆ ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ನನ್ನ ಅಣ್ಣ ಮರಣೋತ್ತರ ಪರೀಕ್ಷೆ ಮಾಡಿಸಿ, ಆತನ ಸಾವಿಗೆ ಕಾರಣವೇನೆಂದು ಅಭಿಪ್ರಾಯ ಕೇಳಿದ್ದೇನೆ ಎಂದರೆ ಸರಿಯಲ್ಲ. ನನಗೆ ಎಲ್ಲ ವಿಚಾರ ಗೊತ್ತಿದ್ದರು ಸಹ ಆರೋಪಿ ನನ್ನ ಅಣ್ಣನ ಸ್ನೇಹಿತನಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಏನು ಇಲ್ಲ ಎಂದು ತಿಳಿಸಿರುತ್ತಾರೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

**I/C 2** ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಪಾಂಡವಪುರ.

ಸಾಕ್ಷಿದಾರರ ಸಹಿ.